# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು.

**ಸಿ. ಸಿ. ನಂ.ಃ 289/2018**

| | | |
|---|---|---|
| ಹೆಸರು | ವಿಜಯ್ ಕೃಷ್ಣ | **ದಿಃ 04-03-2022** |
| ತಂದೆ ಹೆಸರು | ಲೇಟ್ ನಾರಾಯಣಪ್ಪ | |
| ವಯಸ್ಸು | 39 ವರ್ಷ | **ಪಿಡಬ್ಲ್ಯೂಃ 1** |
| ಉದ್ಯೋಗ | ಪೊಲೀಸ್ ಇನ್ಸ್ಪೆಕ್ಟರ್ ಕರ್ನಾಟಕ ಲೋಕಾಯುಕ್ತ ಬೆಂಗಳೂರು | **ಸಿಡಬ್ಲ್ಯೂಃ 1** |
| ವಾಸ | ಬೆಂಗಳೂರು | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಮಾರ್ಚ **2018** ರಿಂದ ಜೂನ್ **2018** ರವರೆಗೆ ಹಳೇಬೀಡು ಠಾಣೆಯಲ್ಲಿ ಪಿಎಸ್ ಐ ಆಗಿ ಕೆಲಸ ಮಾಡಿರುತ್ತೇನೆ.

ದಿಃ **04-04-2018** ರಂದು ಸಂಜೆ **4** ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹಳೇಬೀಡು ಹೋ. ಶಿವನೇನಹಳ್ಳಿ ಗ್ರಾಮದಲ್ಲಿ ರವಿ ಎಂಬುವವರು ತನ್ನ ಮನೆಯ ಮುಂಭಾಗ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ನಾನು ಮತ್ತು ಸಿಬ್ಬಂದಿಗಳಾದ ಚಾಸಾ-**2** ಮತ್ತು **3** ರವರೊಂದಿಗೆ ಸಂಜೆ **4ಃ00** ಕ್ಕೆ ಠಾಣೆಯನ್ನು ಬಿಟ್ಟು ಇಲಾಖಾ ಜೀಪ್ ನಲ್ಲಿ ಶಿವನೇನಹಳ್ಳಿ ಗ್ರಾಮಕ್ಕೆ ಹೋಗಿ ಪಂಚರಾದ ಚಾಸಾ-**4** ಮತ್ತು **5** ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ಯನ್ನು ತಿಳಿಸಿ ಪಂಚರಾಗಲು ಸಹಕರಿಸುವಂತೆ ಕೋರಿದ ಮೇರೆಗೆ ಅವರುಗಳು ಒಪ್ಪಿ ನಮ್ಮ ಜೊತೆ ಬಂದಿರುತ್ತಾರೆ. ಸಂಜೆ **4ಃ45** ಗಂಟೆಗೆ ಆರೋಪಿ ರವಿ ರವರ ಮನೆಯ ಬಳಿ ಹೋಗಿ ನೋಡಲಾಗಿ ಸದರಿ ವ್ಯಕ್ತಿ ಮನೆಯ ಮುಂಭಾಗ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ರವಿ ಬಿನ್ ನಂಜಯ್ಯ, **38** ವರ್ಷ, ಐಸ್ ಕ್ರೀಂ ವ್ಯಾಪಾರ ಶಿವನೇನಹಳ್ಳಿ ಗ್ರಾಮ ಎಂದು ತಿಳಿಸಿದನು. ಆತನು ಮದ್ಯ ಮಾರಾಟ ಮಾಡಲು ಯಾವುದೇ ಪರವಾನಗಿ ಇದೆಯೇ ಎಂದು ವಿಚಾರ ಮಾಡಲಾಗಿ ಯಾವುದೇ ರೀತಿಯ ಪರವಾನಗಿ ಇಲ್ಲ ಎಂದು ತಿಳಿಸಿದ ಮೇರೆಗೆ ಪಂಚರ ಸಮಕ್ಷಮ ಆತನ ಬಳಿ ಇದ್ದ ಮದ್ಯವನ್ನು ಪರಿಶೀಲನೆ ಮಾಡಿದಾಗ **180** ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ ಒಟ್ಟು **5** ಸ್ಯಾಚೇಟ್ ಗಳು **90** ಎಂ ಎಲ್ ನ ರಾಜಾ ವಿಸ್ಕಿಯ **10** ಸ್ಯಾಚೆಟ್ ಗಳು, **90** ಎಂ ಎಲ್ ನ ಅಮೃತ್ ಸಿಲ್ವರ್ ಬ್ರಾಂಡಿ ಯ **10** ಸ್ಯಾಚೇಟ್ ಗಳು

ಇದ್ದು ಅವುಗಳನ್ನು ಪಂಚರ ಸಮಕ್ಷಮ ಸಂಜೆ 5:00 ರಿಂದ 5:45 ವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು ಅವುಗಳಲ್ಲಿ ಎಫ್ ಎಸ್ ಎಲ್ ಗೆಂದು ತಲಾ ಒಂದೊಂದು ಸ್ಯಾಚೆಟ್ ತೆಗೆದು ಅದಕ್ಕೆ ಬಟ್ಟೆ ಕಟ್ಟಿ ದಾರ ಸುತ್ತಿ ಒ ಎಂಬ ಇಲಾಖಾ ಮೊಹರು ಮಾಡಿ ಅಮಾನತ್ತುಪಡಿಸಿಕೊಳ್ಳಲಾಯಿತು. ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಸಂಜೆ 6:15 ಕ್ಕೆ ಠಾಣೆಗೆ ಬಂದು ರವಿ ಎಂಬುವವನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ವರದಿ ತಯಾರಿಸಿ ವರದಿ ಹಾಗೂ ಮಹಜರ್ ಹಾಗೂ ವಶಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಎಸ್ ಹೆಚ್ ಒ ಗೆ ನೀಡಿ ಪ್ರಕರಣ ದಾಖಲು ಮಾಡುವಂತೆ ಸೂಚಿಸಿರುತ್ತೇನೆ.

ಸಾಕ್ಷಿಯು ವರದಿ ಹಾಗೂ ಅದರಲ್ಲಿರುವ ತನ್ನ ಸಹಿ ನೋಡಿ ಗುರ್ತಿಸಿದ್ದು ಸದರಿ ವರದಿಯನ್ನು ನಿಪಿ-1 ಸಾಕ್ಷಿ ಸಹಿ ನಿಪಿ-1(ಎ) ಎಂದು ಗುರ್ತಿಸಲಾಯಿತು.

ಈಗ ತೋರಿಸಿರುವ ಮತ್ತೊಂದು ದಾಖಲೆಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಸದರಿ ದಾಖಲೆ ಕೃತ್ಯ ಸ್ಥಳದ ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ನಿಶಾನೆಗೊಳಪಡಿಸಲಾಯಿತು.

ಸಾಕ್ಷಿಯು ಅಮಾನತ್ತು ಪಡಿಸಿಕೊಂಡ ಸ್ಯಾಚೆಟ್ ಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಮು.ಮಾ-1 ರಿಂದ 3 ಎಂದು ನಿಶಾನೆಗೊಳಪಡಿಸಲಾಯಿತು.

ಸಾಕ್ಷಿ ನ್ಯಾಯಾಲಯದಲ್ಲಿ ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಲ್ ಎನ್ ರವರಿಂದಃ**

ನನಗೆ ಮಾಹಿತಿ ಬಂದಾಗ ಸಮಯ 400 ಗಂಟೆ ಆಗಿತ್ತು. ಆಗ ನಾನು ಠಾಣೆಯಲ್ಲಿ ಇದ್ದೆನು. ನಾನು ಠಾಣೆಯನ್ನು ಬಿಟ್ಟಾಗ 4:10 ಆಗಿತ್ತು. ನಾವು ಶಿವನೇನಹಳ್ಳಿ ಗ್ರಾಮಕ್ಕೆ ಕೆ ಬಿ ಹಾಳ್ ಗ್ರಾಮದ ಮೂಲಕ ಹೋಗಿರುತ್ತೇನೆ. ಶಿವನೇನಹಳ್ಳಿ ಮತ್ತು ದಮ್ಮರಹಟ್ಟಿ ಇವು ಅಕ್ಕಪಕ್ಕದ ಗ್ರಾಮಗಳು. ಆರೋಪಿ ಶಿವನೇನಹಳ್ಳಿ ಗ್ರಾಮಕ್ಕೆ ಸೇರಿದವರು. ಪಂಚರು ಶಿವನೇನಹಳ್ಳಿ ಗ್ರಾಮದವರು. ಶಿವನೇನಹಳ್ಳಿ ಗ್ರಾಮಕ್ಕೆ 50 ಮೀ ಹಿಂದೆಯೇ ರಸ್ತೆಯಲ್ಲಿ ಪಂಚರು ನಿಂತಿದ್ದರು. ಸದರಿ ಪಂಚರನ್ನು ನಮ್ಮ ಸಿಬ್ಬಂದಿ ಪುನೀತ್ ಚಾಸಾ-2 ರವರು ಕರೆದುಕೊಂಡು ಬಂದರು. ಪಂಚರು ನಿಂತಿದ್ದ ಸ್ಥಳದಿಂದ ಆರೋಪಿಯ ಮನೆಗೆ 200 ಮೀ ಅಂತರ ಇರುತ್ತದೆ. ವಾಹನವನ್ನು ಊರಿನ ಹೊರಗೆ ನಿಲ್ಲಿಸಿ ಹೋಗಿದ್ದೆವು. ವಾಹನ ನಿಲ್ಲಿಸಿದ

ಸ್ಥಳದಿಂದ ಆರೋಪಿಯ ಮನೆಗೆ ಸುಮಾರು **250** ಮೀ ಅಂತರ ಇರುತ್ತದೆ. ಆರೋಪಿಯ ಮನೆ ಬಳಿ **4-5** ಜನ ಇದ್ದರು. ನಾವು ಸ್ಥಳಕ್ಕೆ ಹೋಗುತ್ತಿದ್ದಂತೆ ಸದರಿ ವ್ಯಕ್ತಿಗಳು ಹೊರಟು ಹೋದರು.

**2.**ಃ ವಿಸ್ಕಿ ಮತ್ತು ಬ್ರಾಂಡಿಯ ಸ್ಯಾಚೇಟ್ ಗಳನ್ನು ಒಂದೇ ಪ್ಲಾಸ್ಟಿಕ್ ಕವರ್ ನಲ್ಲಿ ಸಂಗ್ರಹಿಸಿ ಇಟ್ಟಿದ್ದರು. ನಾವು ಪ್ಲಾಸ್ಟಿಕ್ ಕವರ್ ಸಮೇತ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಪ್ಲಾಸ್ಟಿಕ್ ಕವರ್ ಈ ದಿನ ನ್ಯಾಯಾಲಯದಲ್ಲಿ ಇರುವುದಿಲ್ಲ. ಪಂಚರಿಂದ ಮಹಜರ್ ಗೆ ಮತ್ತು ಸ್ಯಾಚೆಟ್ ಮೇಲೆ ಸಹಿಗಳನ್ನು ಪಡೆದಿರುತ್ತೇನೆ. ಪಂಚರು ಕನ್ನಡ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಕನ್ನಡದಲ್ಲಿ ಸಹಿ ಮಾಡಿದ ಚೀಟಿಯನ್ನು ಸ್ಯಾಚೆಟ್ ಗೆ ಅಂಟಿಸಿರುತ್ತೇವೆ. ಸಾಕ್ಷಿಗೆ ಮು.ಮಾ-**1** ರಿಂದ **3** ನ್ನು ತೋರಿಸಲಾಗಿ ಅದರ ಮೇಲಿರುವ ಪಂಚರ ಸಹಿಗಳನ್ನು ನೋಡಿ ಸಾಕ್ಷಿಯು ಸದರಿ ಸಹಿ ಇಂಗ್ಲೀಷ್ ಭಾಷೆಯಲ್ಲಿ ತಪ್ಪಿನಿಂದ ಆಗಿ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಸಹಿ ಈ ಮೊಕದ್ದಮೆಗೆ ಸಂಬಂಧಿಸಿದ ಸಹಿ ಅಲ್ಲ ಎಂದರೆ ಸರಿ. ಮು.ಮಾ-**1** ರಿಂದ **3** ರ ಮೇಲೆ ಪ್ರಕರಣದ ಸಂಖ್ಯೆ **116** ಎಂದು ಬರೆದಿದ್ದು ಅದು ಯಾವ ಇಸವಿ ಎಂದು ನಮೂದು ಮಾಡಿರುವುದಿಲ್ಲ. ಈ ರೀತಿ ಇಸವಿ ನಮೂದು ಮಾಡದೇ ಇರುವ ಕಾರಣ ಅದು ಈ ಕೇಸಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಇನ್ನೊಂದು ಸ್ಯಾಚೆಟ್ ಮೇಲೆ ಪ್ರಕರಣದ ಸಂಖ್ಯೆ ನಮೂದು ಮಾಡಿರದ ಕಾರಣ ಅದು ಈ ಕೇಸಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ನಾನು ವರದಿ ಮತ್ತು ಮಹಜರ್ ನ್ನು ಎಸ್ ಹೆಚ್ ಒ ಆಗಿದ್ದ ಎ ಎಸ್ ಐ ಗೋವಿಂದಪ್ಪ ರವರಿಗೆ ಸಲ್ಲಿಸಿರುತ್ತೇನೆ. ನಾವು ಅಮಾನತ್ತುಪಡಿಸಿಕೊಂಡ ಸ್ವತ್ತುಗಳಿಗೆ ಮೊಕದ್ದಮೆ ನಂ. ನ್ನು ನೀಡಿರುವುದಿಲ್ಲ. ಮು.ಮಾ-**1** ರಿಂದ **3** ಕ್ಕೆ ಕಂಪ್ಯೂಟರ್ ನಲ್ಲಿ ಪ್ರಿಂಟ್ ತೆಗೆದ ಚೀಟಿಯನ್ನು ಎಫ್ ಎಸ್ ಎಲ್ ಕಳುಹಿಸುವಾಗ ಅಂಟಿಸಲಾಗಿರುತ್ತದೆ. ಅಮಾನತ್ತುಪಡಿಸಿದ **3-4** ದಿನಗಳ ನಂತರ ಸದರಿ ಚೀಟಿಯನ್ನು ಅಂಟಿಸಲಾಗಿರುತ್ತದೆ. ಮು.ಮಾ-**1** ರಿಂದ **3** ಯಾವ ಪ್ರಕರಣಕ್ಕೆ ಸಂಬಂಧಿಸಿದೆ ಎಂದು ಬರೆದುಕೊಂಡಿರುವುದಿಲ್ಲ, ಸಾಕ್ಷಿಯು ಮು.ಮಾ-**1** ರಿಂದ **3** ನ್ನು ಸಂಬಂಧಪಟ್ಟ ಕಡತದೊಂದಿಗೆ ಸೇರಿಸಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ.

**3.**ಃ ನಾವು ದಿಃ **04-04-2018** ರಂದು ಶಿವನೇನಹಳ್ಳಿ ಗ್ರಾಮಕ್ಕೆ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆ ಜಗಲಿ ಮೇಲೆ ಟೆಟ್ರಾ ಪ್ಯಾಕೇಟ್ ಗಳನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಶಿವನೇನಹಳ್ಳಿ ಗ್ರಾಮದಲ್ಲಿ ಯಾವುದೇ ಮನೆ

ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ದಮ್ಮರಹಟ್ಟಿ ಗ್ರಾಮಕ್ಕೆ ಸೇರಿದವರಾಗಿದ್ದು ಶಿವನೇನಹಳ್ಳಿ ಗ್ರಾಮಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ನಾನು ಅಂಕಿಅಂಶಗಳಿಗಾಗಿ ಠಾಣೆಯಲ್ಲಿ ಕುಳಿತುಕೊಂಡು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸುಳ್ಳು. ಮು.ಮಾ-1 ರಿಂದ 3 ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಇಲಾಖಾ ಅಂಕಿಅಂಶಗಳಿಗಾಗಿ ಆರೋಪಿ ವಿರುದ್ದ ಸುಳ್ಳು ದೂರು ದಾಖಲು ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.